ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರು ರವರ ಕಛೇರಿ, ಪಾಲಿಕೆಯ ಮುಖ್ಯ ಕಛೇರಿಗಳು, ನಗರಂಪರಾಜ ಬೌಕ, ಬೆಂಗಳೂರು-560 002.

ಸಂಖ್ಯೆ:ಬಿ.ಬಿ.ಎಂ.ಪಿ/ಆ/ಬಿ.ಆರ್/ 1602 /2019-20 ದಿನಾಂಕ: 23-07-2019

ರವರಿಗೆ :-
ಮುಖ್ಯ ಅಭಿಯಂತರರು
(ಪೂರ್ವ, ಪಶ್ಚಿಮ, ದಕ್ಷಿಣ, ಬೊಮ್ಮನಹಳ್ಳಿ, ಮಹದೇವಪುರ, ರಾಜರಾಜೇಶ್ವರಿನಗರ, ದಾಸರಹಳ್ಳಿ, ಯಲಹಂಕ, ಯೋಜನೆ-ಕೇಂದ್ರ, ರಸ್ತೆ ಮೂಲಭೂತ ಸೌಕರ್ಯ, ಬೃಹತ್ ನೀರುಗಾಲುವೆ, ಘನತ್ಯಾಜ್ಯ ವಸ್ತುಗಳ ನಿರ್ವಹಣೆ ಮತ್ತು ಕೆರೆಗಳು)

-:: ಕಛೇರಿ ಆದೇಶ ::-

ವಿಷಯ :- 14ನೇ ಹಣಕಾಸು ಆಯೋಗದ ಅಡಿ 2018-19ನೇ ಸಾಲಿನಲ್ಲಿ ಬಿಬಿಎಂಪಿಗೆ ಹಂಚಿಕೆ ಮಾಡಿರುವ ಅನುದಾನದಲ್ಲಿ ಕೈಗೊಳ್ಳುವ ಕಾಮಗಾರಿಗಳನ್ನು ಮೈಕ್ರೋ.ಆರ್.ಐ.ಡಿ.ಎಲ್ ಸಂಸ್ಥೆಯ ಮುಖಾಂತರ ಅನುಷ್ಠಾನಗೊಳಿಸುವ ಬಗ್ಗೆ.

ಉಲ್ಲೇಖ :- 1. ಭಾರತ ಸರ್ಕಾರದ ಪತ್ರ ಸಂಖ್ಯೆ: ಸಆಇ/185/ಎಸ್.ಎಫ್.ಸಿ/2018, ದಿನಾಂಕ:20/10/2018.
2. ವಿಶೇಷ ಆಯುಕ್ತರು (ಯೋಜನೆ) ರವರ ಕಛೇರಿಯ ಪತ್ರದ ಸಂಖ್ಯೆ ಆ/ಬಿಆರ್/4405/2018-19, ದಿನಾಂಕ:31/10/2018.
3. ಮಾನ್ಯ ಆಯುಕ್ತರು ರವರ ಕಛೇರಿಯ ಸಂಖ್ಯೆ:ಆ/ಬಿಆರ್/5761/2018-19, ದಿನಾಂಕ: 21/01/2019.
4. ಮುಖ್ಯ ಮಹಾಪೌರರು ದಿನಾಂಕ:20/07/2019 ರಂದು ಮಾನ್ಯ ಆಯುಕ್ತರು, ಬಿಬಿಎಂಪಿ ರವರಿಗೆ ಪತ್ರದಂತೆ.

--*-*-*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮತ್ತು ಸರ್ಕಾರದ ಉಲ್ಲೇಖದ ಪತ್ರದಲ್ಲಿ 14ನೇ ಹಣಕಾಸು ಆಯೋಗದ ಅಡಿ 2018-19ನೇ ಸಾಲಿನಲ್ಲಿ ಬಿಬಿಎಂಪಿಗೆ ಹಂಚಿಕೆ ಮಾಡಿರುವ ಒಟ್ಟು ಅನುದಾನದ ಪೊತ್ತವನ್ನು 2018-19ನೇ ಸಾಲಿನ ಆರ್ಥಿಕ ವರ್ಷದಲ್ಲಿಯೇ ಅನುಷ್ಠಾನಗೊಳಿಸಬೇಕಾಗಿದ್ದು ಹಾಗೂ ಉಲ್ಲೇಖ (1) ರ ಅಡಿಯ ಸರ್ಕಾರದ ಆದೇಶದಲ್ಲಿ ಸೂಚಿಸಿದಂತೆ, ಈ ಹಂತದಲ್ಲಿ ಮಾರ್ಗಸೂಚಿಯಲ್ಲಿ ಯಾವುದೇ ಸಡಲಿಕೆಗೆ ನೀಡಲಾಗುವುದಿಲ್ಲವೆಂದು ಮಾಜ್ಞ ತಿಳಿಸಿ ನಿಯಮಾನುಸಾರ ಕೆ.ಟಿ.ಪಿ.ಪಿ ಕಾಯ್ದೆಯ ಅನ್ವಯ ಟೆಂಡರ ಪ್ರಕ್ರಿಯೆ ನಡೆಸಿ, ಆರ್ಥಿಕ ವರ್ಷಾಂತ್ಯದೊಳಗೆ ಕಾರ್ಯಾನುಷ್ಠಾನ ಪೂರ್ಣಗೊಳಿಸಲು ಸೂಕ್ತ ಕ್ರಮ ಕೈಗೊಳ್ಳತಕ್ಕದ್ದು ಎಂದು ಆದೇಶ ಮೇಲ್ಕಂಡ ಉಲ್ಲೇಖ (2) ರಲ್ಲಿ ಈಗಾಗಲೇ ಸೂಚನೆ ನೀಡಲಾಗಿತ್ತು.

ಮೇಲ್ಕಂಡ ಉಲ್ಲೇಖ (3) ರ ಅಡಿಯಲ್ಲಿ ಭಾರತ ಸರ್ಕಾರಕ್ಕೆ ಪತ್ರ ಬರೆದಂತೆ, 2019ನೇ ಸಾಲಿನ ಮೇ ತಿಂಗಳಲ್ಲಿ ಲೋಕಸಭಾ ಚುನಾವಣೆ ನಡೆಯಲಿದ್ದು, ಮಾರ್ಚ್-2019 ರಿಂದ ಚುನಾವಣಾ ನೀತಿ ಸಂಹಿತೆ ಜಾರಿಯಾಗುವ ಹಿನ್ನೆಲೆಯಲ್ಲಿ, ಟೆಂಡರ್ ಪ್ರಕ್ರಿಯೆಗಳು ನಡೆಯಲು ಕಾಲಾವಕಾಶ ಶುಂಠಾ ಕಡಿಮೆ ಇರುವುದರಿಂದ ಈ ಹಿನ್ನೆಲೆಯಲ್ಲಿ, ಮೇಲ್ಕಂಡ ಉಲ್ಲೇಖ (1) ರ ಸರ್ಕಾರದ ಪತ್ರದಲ್ಲಿ ಸೂಚಿಸಿರುವ ತೀರ್ಮಾನಗಳನ್ನು ಮರು ಪರಿಶೀಲಿಸಿ, 2018-19ನೇ ಸಾಲಿನ 14ನೇ ಹಣಕಾಸು ಆಯೋಗದ ಅಡಿಯಲ್ಲಿ ಪಾಲಿಕೆಗೆ ನಿಗದಿಪಡಿಸಿರುವ ಒಟ್ಟು ಪೊತ್ತ ರೂ.3015.00 ಲಕ್ಷಗಳನ್ನು ಮೈಕ್ರೋ.ಆರ್.ಐ.ಡಿ.ಎಲ್ ಸಂಸ್ಥೆಯ ಮುಖಾಂತರ ಅನುಷ್ಠಾನಗೊಳಿಸಲು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಸ್ಥೆಯಲ್ಲಿ ಪಾರದರ್ಶಕತೆ ಅಧಿನಿಯಮ-1999 ರ ಕಲಂ4(ಜಿ) ರ ಅಡಿ ಪ್ರದತ್ತವಾದ ಅಧಿಕಾರವನ್ನು ಪಾರದರ್ಶಕ ಕಾಯ್ದೆಯಿಂದ ವಿನಾಯಿತಿ ನೀಡಲು ಕೋರಲಾಗಿರುತ್ತದೆ.

2.

Scanned with CamScanner

ಮೇಲ್ಕಂಡ ಉಲ್ಲೇಖ (4) ರ ಅಡಿಯಲ್ಲಿ ಮೂಲ್ಯ ಮಹಾಪೌರರು ಆಯುಕ್ತರು ರವರ ಕಛೇರಿಗೆ ಬರೆದ ಪತ್ರದಂತೆ, 14ನೇ ಹಣಕಾಸು ಅನುದಾನದಲ್ಲಿ ಕೈಗೊಳ್ಳಲಾಗುವ ಕಾಮಗಾರಿಗಳನ್ನು ಮೂಕಿ.ಆರ್.ಐ.ಡಿ.ಎಲ್ ಸಂಸ್ಥೆಯ ಮುಖಾಂತರ ನಿರ್ವಹಿಸಲು ಈ ಹಿಂದಿನ ಕೌನ್ಸಿಲ್ ಸಭೆಯಲ್ಲಿ ನಿರ್ಣಯದ ವಿಷಯ ಸಂಖ್ಯೆ:112/2018-19, ದಿನಾಂಕ:28/08/2018 ರಲ್ಲಿ ಕೈಗೊಂಡಂತೆ ಸರ್ಕಾರದ ಅನುಮತಿಗೆ ಕಳುಹಿಸಲಾಗಿತ್ತು. ಆದರೆ ಸರ್ಕಾರದಿಂದ ಇಲ್ಲಿಯವರೆಗೂ ಯಾವುದೇ ಆದೇಶ ಬರದೇ ಇರುವ ಹಿನ್ನೆಲೆಯಲ್ಲಿ, ಸದರಿ ನಿರ್ಣಯವನ್ನು Deemed Permission ಎಂದು ಪರಿಗಣಿಸಬಹುದೇ ಎಂದು ಸಭೆಯಲ್ಲಿ ಮಾನ್ಯ ಸದಸ್ಯರುಗಳು ಏವರಣೆ ಕೋರುತ್ತಾ, ಕೂಡಲೇ ಸುತ್ತೋಲೆಯನ್ನು ಹೊರಡಿಸಬೇಕೆಂದು ಕೋರುತ್ತಾರೆ.

ಈ ಹಿನ್ನೆಲೆಯಲ್ಲಿ, ಪಾಲಿಕೆಯ ಎಲ್ಲಾ ಕಾರ್ಯಪಾಲಕ ಅಭಿಯಂತರರುಗಳು 2018-19 ಸಾಲಿನ ಪಾಲಿಕೆಯ ಆಯವ್ಯಯದಲ್ಲಿ 14ನೇ ಹಣಕಾಸು ಆಯೋಗದಿಂದ ಪಾಲಿಕೆಗೆ ನಿಗಧಿಪಡಿಸಿರುವ ಅನುದಾನದ ಕಾಮಗಾರಿಗಳನ್ನು ಶ್ರೇಯಾ ಯೋಜನೆಗೆ (9 ನಿಗಧಿತ ಯೋಜನೆಗಳಿಗೆ) ನಿಯಮಾನುಸಾರ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ತದನಂತರ ಅನುಮೋದಿತ ಶ್ರೇಯಾ ಯೋಜನೆ ಕಾಮಗಾರಿಗಳನ್ನು ಮೂಕಿ.ಆರ್.ಐ.ಡಿ.ಎಲ್ ಸಂಸ್ಥೆಯ ಮುಖಾಂತರ ಅನುಷ್ಠಾನಗೊಳಿಸಲು ನಿರ್ದೇಶನ ನೀಡಿದೆ.

ಆಯುಕ್ತರು 24/7/19
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು :-

1. ಮೂಲ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
2. ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
3. ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
4. ಆಡಳಿತ ಪಕ್ಷದ / ವಿರೋಧ ಪಕ್ಷ / ಜೆಡಿಎಸ್ (ಪಕ್ಷ) ದ ನಾಯಕರುಗಳ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
5. ಎಲ್ಲಾ ಸ್ಥಾಯಿ ಸಮಿತಿಗಳ ಅಧ್ಯಕ್ಷರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
6. ಪ್ರಧಾನ ಅಭಿಯಂತರರು, ರವರ ಮಾಹಿತಿಗಾಗಿ ಕಳುಹಿಸಿದೆ.
7. ಕಛೇರಿ ಕಡತಕ್ಕೆ.

Scanned with CamScanner
Scanned by CamScanner

Scanned with CamScanner